ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **1602**

ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 20-03-2020

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಖಾಸಗಿ ಬಸ್ಸು ರಹದಾರಿಗಳನ್ನು ರಾಷ್ಟ್ರೀಕೃತಗೊಳಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಇದ್ದರೆ, ವಿವರ ನೀಡುವುದು;	ಖಾಸಗಿ ಬಸ್ ರಹದಾರಿಗಳನ್ನು ರಾಷ್ಟ್ರೀಕೃತಗೊಳಿಸುವ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ.
ಆ)	ರಾಜ್ಯದಲ್ಲಿ ಎಷ್ಟು ಖಾಸಗಿ ಬಸ್ಸುಗಳು ಕಾರ್ಯನಿರ್ವಹಿಸುತ್ತಿವೆ; ಇದರಿಂದ ರಾಜ್ಯ ಸಾರಿಗೆ ಇಲಾಖೆಗೆ ಉಂಟಾಗುವ ತೊಂದರೆಗಳೇನು; ಯಾವ ಯಾವ ಜಿಲ್ಲೆಗೆ ತೊಂದರೆಯುಂಟಾಗಿದೆ;	ರಾಜ್ಯದಲ್ಲಿ ಒಟ್ಟು 7,622 ಖಾಸಗಿ ಬಸ್ಸುಗಳು ನೋಂದಣಿಯಾಗಿರುತ್ತವೆ. ಇದರಿಂದಾಗಿ ಸಾರಿಗೆ ಇಲಾಖೆಗೆ ಯಾವುದೇ ತೊಂದರೆಯಿರುವುದಿಲ್ಲ.
ಇ)	ಪ್ರಸ್ತುತ, ಮಂಗಳೂರು ನಗರದಲ್ಲಿ ಸಂಚರಿಸುವ ನಗರ ಸಾರಿಗೆ ಬಸ್ಸುಗಳೆಷ್ಟು; ಯಾವ ಜಿಲ್ಲೆಗಳಲ್ಲಿ ನಗರ ಸಾರಿಗೆ ಬಸ್ಸುಗಳನ್ನು ಸಂಚಾರಕ್ಕೆ ಹಾಕಲಾಗಿದೆ; (ವಿವರ ನೀಡುವುದು)	423 ಬಸ್ಸುಗಳು ಮಂಗಳೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳಾಗಿ ಸಂಚರಿಸುತ್ತಿವೆ. ಖಾಸಗಿಯವರಿಗೆ ಶಿವಮೊಗ್ಗ, ದಾವಣಗೆರೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಗರ ಸಾರಿಗೆ ಸಂಚಾರಕ್ಕೆ ರಹದಾರಿ ನೀಡಲಾಗಿದೆ. ಪ್ರಸ್ತುತ ಕ.ರಾ.ರ.ಸಾ. ನಿಗಮದ ಮಂಗಳೂರು ವಿಭಾಗದಿಂದ ಮಂಗಳೂರು ನಗರ ವ್ಯಾಪ್ತಿಯಲ್ಲಿ 35 ನಗರ ಸಾರಿಗೆ ಬಸ್ಸುಗಳು ಕಾರ್ಯಾಚರಿಸುತ್ತಿವೆ. **ಕ.ರಾ.ರ.ಸಾ.ನಿಗಮ** ಕ.ರಾ.ರ.ಸಾ. ನಿಗಮದ ಕಾರ್ಯ ವ್ಯಾಪ್ತಿಯಲ್ಲಿ ಬರುವ ಕೆಳಕಂಡ 16 ನಗರಗಳಲ್ಲಿ ನಗರ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. 1. ರಾಮನಗರ — 9. ಹಾಸನ 2. ತುಮಕೂರು — 10. ಚಾಮರಾಜನಗರ 3. ಕೋಲಾರ — 11. ದಕ್ಷಿಣ ಕನ್ನಡ (ಮಂಗಳೂರು) 4. ಕೆ.ಜಿ.ಎಫ್. — 12. ಉಡುಪಿ 5. ಚಿಕ್ಕಬಳ್ಳಾಪುರ — 13. ದಾವಣಗೆರೆ 6. ಮೈಸೂರು — 14. ಶಿವಮೊಗ್ಗ 7. ಮಂಡ್ಯ — 15. ಭದ್ರಾವತಿ 8. ಚಿಕ್ಕಮಗಳೂರು — 16. ಚಿತ್ರದುರ್ಗ **ಬೆಂ.ಮ.ನ.ಸಾ.ಸಂಸ್ಥೆ** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಜಿಲ್ಲೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಿಂದ 25 ಕಿ.ಮೀ. ವರೆಗೆ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ.

		ವಾ.ಕ.ರ.ಸಾ.ಸಂಸ್ಥೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 06 ಜಿಲ್ಲೆಗಳಲ್ಲಿ ನಗರ ಸಾರಿಗೆ ಬಸ್ಸುಗಳನ್ನು ಕಾರ್ಯಾಚರಿಸಲಾಗುತ್ತಿದೆ. 1. ಧಾರವಾಡ; 4. ಗದಗ 2. ಬೆಳಗಾವಿ; 5. ಹಾವೇರಿ 3. ಬಾಗಲಕೋಟೆ; 6. ಉತ್ತರ ಕನ್ನಡ **ಈ.ಕ.ರ.ಸಾ.ಸಂಸ್ಥೆ** ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 07 ಜಿಲ್ಲೆಗಳಲ್ಲಿ ನಗರ ಸಾರಿಗೆ ಬಸ್ಸುಗಳನ್ನು ಕಾರ್ಯಾಚರಿಸಲಾಗುತ್ತಿದೆ. 1. ಕಲಬುರಗಿ; 5. ಬಳ್ಳಾರಿ 2. ಬೀದರ; 6. ಕೊಪ್ಪಳ 3. ಯಾದಗಿರಿ; 7. ವಿಜಯಪುರ 4. ರಾಯಚೂರು
ಈ)	ರಾಜ್ಯದಲ್ಲಿ ಎಲ್ಲಾ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಿದರೆ ರಾಜ್ಯ ಸರ್ಕಾರಕ್ಕೆ ಎಷ್ಟು ಹಣಕಾಸಿನ ಹೊರೆಯಾಗುವ ಸಾಧ್ಯತೆ ಇದೆ; (ವಿವರ ನೀಡುವುದು)	ಕರ್ನಾಟಕ ಸರ್ಕಾರವು ದಿನಾಂಕ:07-03-2019ರ ಅಧಿಸೂಚನೆಯ ಪ್ರಕಾರ ಹಾಲಿ ಚಾಲನೆಯಲ್ಲಿರುವ ಖಾಸಗಿ ಮಜಲು ವಾಹನಗಳ ರಹದಾರಿಗಳನ್ನು ಹೊರತುಪಡಿಸಿ ಎಲ್ಲಾ ಮಾರ್ಗಗಳನ್ನು ಸಮಗ್ರ ಕರ್ನಾಟಕ ಪ್ರದೇಶ ಸಾರಿಗೆ ಯೋಜನೆಯ ಮೂಲಕ ರಾಷ್ಟ್ರೀಕರಣಗೊಳಿಸಿದೆ. ಇದರಿಂದಾಗಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ.
ಉ)	ಖಾಸಗಿ ಬಸ್ಸು ಮಾಲೀಕರು ಲಾಭ ಬರುವ ಮಾರ್ಗಗಳಲ್ಲಿ ಮಾತ್ರ ಬಸ್ಸುಗಳನ್ನು ಒದಗಿಸುತ್ತಾರೆ ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರ ನೀಡುವುದು)	ಈ ಬಗ್ಗೆ ಯಾವುದೇ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಟಿಡಿ 43 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು